14

# ಸಭೆಯು ಕ್ರಿಸ್ತನ ರಾಜ್ಯವಾಗಿರುವುದೋ?

ಹೊಸ ಒಡಂಬಡಿಕೆಯ ಸುಮಾರು 48 ಶತ ಭಾಗವು ಯೇಸವಿನ ಜೀವಿತವನ್ನು ಚರ್ಚಿಸುತ್ತದೆ ಹಾಗೂ ಅದರ 52 ಶತ ಭಾಗವು ಯೇಸುವು ಸೃಷ್ಟಿಸಿದ್ದನ್ನು ಅಂದರೆ ಸಭೆಯನ್ನು ಕುರಿತು ಚರ್ಚಿಸುತ್ತದೆ. ತನ್ನ ಸೇವೆಯ ಅವಧಿಯಲ್ಲಿ ಯೇಸುವು ಸತತವಾಗಿ ಪರಲೋಕ ರಾಜ್ಯದ ಬಗ್ಗೆ ಮಾತಾಡಿದನು (ಉದಾಹರಣೆಯಾಗಿ ನೋಡಿರಿ: ಮತ್ತಾಯ 4:17). ಪರಲೋಕ ರಾಜ್ಯವು ಯಾವಾಗ ಸ್ಥಾಪಿಸಲ್ಪಡುತ್ತದೆ ಎಂಬುದನ್ನು ಹಾಗೆಯೇ ಸಭೆಯು ಯಾವಾಗ ಸ್ಥಾಪಿಸಲ್ಪಡುತ್ತದೆ ಎಂಬುದನ್ನು ಆತನು ಸೂಚಿಸಿದನು. ಆತನು ಎರಡು ಭಿನ್ನವಾದ ವಿಷಯಗಳ ಬಗ್ಗೆ ಇಲ್ಲವೇ ಒಂದು ವಿಷಯವನ್ನು ಎರಡು ವಿಧಗಳಲ್ಲಿ ಸಂಬಂಧಿಸಿ ಹೇಳಿದನೋ?

## ಪ್ರವಾದನೆಯಲ್ಲಿ ಸಭೆ

"ಯೆಹೋವನ ಮಂದಿರದ ಬೆಟ್ಟದ" ಬಗ್ಗೆ ಯೆಶಾಯ 2:2-4 ಮಾತಾಡುತ್ತದೆ. ಇದು ಪ್ರವಾದನೆಯಲ್ಲಿ ಸಭೆಯ ಚಿತ್ರವಾಗಿದೆ. ಯೆಶಾಯನ ಸಮಯದಲ್ಲಿ ಸಭೆಯು ಅಸ್ತಿತ್ವದಲ್ಲಿರಲಿಕ್ಕಿಲ್ಲ. ಈ ಪ್ರವಾದನೆಗನುಗುಣವಾಗಿ ಯೆಹೋವನ ಮಂದಿರವು "ಅಂತಿಮ ದಿನಗಳಲ್ಲಿ" ಕಟ್ಟಲ್ಪಡುವುದು, ಮತ್ತು ಎಲ್ಲಾ ಜನಾಂಗಗಳು ಅದರಲ್ಲಿ ಪ್ರವೇಶಿಸುವವು. ಯೆಹೋವನ ಆಲಯವು ಸಭೆಯಾಗಿರವುದು (1 ತಿಮೊಥೆ 3:15).

"ನಾನು ನನ್ನ ಸಭೆಯನ್ನು ಕಟ್ಟುವೆನು" ಎಂದು ಯೇಸು ಹೇಳಿದನು (ಮತ್ತಾಯ 16:18). ಸಭೆಯು ಸ್ನಾನಿಕನಾದ ಯೋಹಾನನ ದಿನಗಳಲ್ಲಿ ಸ್ಥಾಪಿಸಲ್ಪಡಲಿಲ್ಲ. ಯೇಸು ಈ ಮಾತುಗಳನ್ನು ಹೇಳಿದಾಗ ಅದು ಅಸ್ತಿತ್ವದಲ್ಲಿರಲಿಲ್ಲ. ಮತ್ತಾಯ 18:17 ಸಭೆಯನ್ನು ನಮೂದಿಸುತ್ತದೆ. ಅಲ್ಲಿ ಯೇಸುವಿನಿಂದ ಕೊಡಲ್ಪಟ್ಟ ಉಪದೇಶಗಳನ್ನು ಸಭೆಯು ಅಸ್ತಿತ್ವದಲ್ಲಿ ಬಂದ ನಂತರ ಗಮನಿಸಬೇಕಾಗಿತ್ತು.

ಹೊಸ ಒಡಂಬಡಿಕೆಗಿಂತ ಮೊದಲು ಹೊಸ ಒಡಂಬಡಿಕೆಯ ಸಭೆಯು ಇರಲಿಲ್ಲ ಹಾಗೂ ಕ್ರಿಸ್ತನ ಮರಣವಾಗುವದಕ್ಕಿಂತ ಮೊದಲು ಹೊಸ ಒಡಂಬಡಿಕೆಯು ಜಾರಿಯಲ್ಲಿರಲಿಲ್ಲ (ಇಬ್ರಿಯ 9:16, 17). ಆದುದರಿಂದ ಕ್ರಿಸ್ತನ ಮರಣಕ್ಕಿಂತ ಮೊದಲು ಸಭೆಯು ಅಸ್ತಿತ್ವದಲ್ಲಿರಲಾರದು.

ಯೇಸುವಿನ ಮರಣ, ಪುನರುತ್ಥಾನ ಮತ್ತು ದಿವಾರೋಹಣದ ನಂತರ ಅಪೊಸ್ತಲರ ಕೃತ್ಯ 2ರಲ್ಲಿ ಸಭೆಯ ಬಗ್ಗೆ ಓದುತ್ತೇವೆ. ಈ ಅಧ್ಯಾಯವನ್ನು ಜಾಗರೂಕತೆಯಿಂದ ಓದುವಾಗ, ಸಂಭವಿಸಿದ ಘಟನೆಗಳ ಪರಿಣಾಮವಾಗಿ ಆ ದಿನದಂದು ಸಭೆಯು ಸ್ಥಾಪಿಸಲ್ಪಟ್ಟಿತೆಂಬುದು ಪ್ರಕಟವಾಗುತ್ತದೆ. ಆ ದಿನದಂದು ಸುವಾರ್ತೆಯು ಮೊದಲು ಪ್ರಸಂಗಿಸಲ್ಪಟ್ಟಿತು. ರಕ್ಷಣೆ ಹೊಂದಬೇಕಾದರೆ ಏನು ಮಾಡಬೇಕೆಂದು ಜನರಿಗೆ ಹೇಳಲ್ಪಟ್ಟಿತು (ಅಪೊಸ್ತಲರ ಕೃತ್ಯ 2:38). ಆ ದಿನ ಮೂರು ಸಾವಿರ ಜನರು ಸೇರಿಸಲ್ಪಟ್ಟರು (ವ. 41). ಅನಂತರ

ದಿನದಿನವೂ ರಕ್ಷಿಸಲ್ಪಟ್ಟವರು ಸಭೆಗೆ ಕೂಡಿಸಲ್ಪಟ್ಟರು (ವ. 47).

ಇದರ ನಂತರ ಪ್ರವಾದನೆಯಂತೆ ಸಭೆಯ ಬಗ್ಗೆ ಹೇಳಲ್ಪಟ್ಟಿರುವದಿಲ್ಲ. ಆದರೆ ಅಸ್ತಿತ್ವದಲ್ಲಿರುವ ಸಂಘಟನೆಯಂತೆ ಹೇಳಲ್ಪಟ್ಟಿದೆ. ಅದು "ಅಂತಿಮ ದಿನಗಳಲ್ಲಿ" ಸ್ಥಾಪಿಸಲ್ಪಡುವದೆಂದು ಯೆಶಾಯನು ಮುಂತಿಳಿಸಿದ್ದನು; ಮತ್ತು ಪಂಚಾಶತ್ತಮ ದಿನದ ಪ್ರಸಂಗದಲ್ಲಿ ಪೇತ್ರನು ಆ ದಿನದ ಘಟನೆಗಳು ಯೋವೇಲನ ಪ್ರವಾದನೆಯ ನೆರವೇರಿಕೆಯಾಗಿದೆಯೆಂದು ಘೋಷಿಸಿದನು (ವ. 16). ಅವು "ಅಂತಿಮ ದಿನಗಳಲ್ಲಿ" (ವ. 17) ಸಂಭವಿಸುವವೆಂದು ಯೋವೇಲನು ಮುಂತಿಳಿಸಿದ್ದನು. ಅಂತಿಮ ದಿನಗಳಲ್ಲಿ ಸಭೆಯು ಸ್ಥಾಪಿಸಲ್ಪಟ್ಟಿತು. ನಾವಿನ್ನೂ "ಅಂತಿಮ ದಿನಗಳಲ್ಲಿ" ಸಮಯದ ಕೊನೆಯ ಅವಧಿಯಲ್ಲಿ ಜೀವಿಸುತ್ತಿದ್ದೇವೆ. ಯೋವೇಲನ ಪ್ರಕಾರವಾಗಿ ದೇವರ ಮನೆಯು ಎಲ್ಲಾ ಜನಾಂಗಗಳನ್ನು ಒಳಗೊಂಡಿರುವುದು. ಪಂಚಾಶತ್ತಮ ದಿನದಂದು ಪೇತ್ರನು ತಾನು ಮಾತಾಡುತ್ತಿದ್ದ ಯೆಹೂದ್ಯರಿಗಾಗಿಯೂ "ದೂರದಲ್ಲಿರುವ ಎಲ್ಲರಿಗಾಗಿಯೂ" ವಾಗ್ದಾನವು ಇರುವುದೆಂದು ಹೇಳಿದನು (ವ. 39). ಸಭೆಯಲ್ಲಿ ಎಲ್ಲಾ ಜನಾಂಗಗಳೂ ದೇವರೊಂದಿಗೆ ಸಂಧಾನಗೊಂಡಿವೆ (ಎಫೆಸ 2:14-16).

## ರಾಜ್ಯದ ಪ್ರಾರಂಭ

ರಾಜ್ಯಕ್ಕೆ ಸಂಬಂಧಿಸಿದ ಕೆಲವು ಹೇಳಿಕೆಗಳನ್ನು ಈಗ ಪರೀಕ್ಷಿಸೋಣ.

1. ದಾನಿಯೇಲ 2:44ರಲ್ಲಿ ರೋಮನ್ ಅರಸರ ದಿನಗಳಲ್ಲಿ ರಾಜ್ಯವು ಸ್ಥಾಪಿಸಲ್ಪಡುವದೆಂದು ನಾವು ಓದುತ್ತೇವೆ.

2. "ದೇವರ ರಾಜ್ಯವು ಸಮೀಪವಾಯಿತು" ಎಂದು ಸ್ನಾನಿಕನಾದ ಯೋಹಾನನು ಹೇಳಿದನು (ಮತ್ತಾಯ 3:2).

3. ತನ್ನ ವೈಯಕ್ತಿಕ ಸೇವೆಯಲ್ಲಿ ಯೇಸುವು ದೇವರ ರಾಜ್ಯವು "ಸಮೀಪಿಸಿತು" ಎಂದು ಹೇಳಿದನು (ಮಾರ್ಕ 1:15; ಮತ್ತಾಯ 10:5-7; ಲೂಕ 10:9).

4. ಕ್ರಿಸ್ತನ ಪುನರುತ್ಥಾನದ ನಂತರ ಶಿಷ್ಯರು ರಾಜ್ಯವನ್ನು ಕುರಿತು ಆತನನ್ನು ಪ್ರಶ್ನಿಸಿದರು. "ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯ 1:8) ಎಂದು ಆತನು ವಾಗ್ದಾನ ಮಾಡಿದನು. ಆತನು ಮೊದಲು ಮಾಡಿದ ಇನ್ನೊಂದು ವಾಗ್ದಾನವನ್ನು ನಮ್ಮ ಮನಸ್ಸಿಗೆ ತರುತ್ತದೆ. "ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವ ತನಕ ಮರಣ ಹೊಂದುವದಿಲ್ಲ" (ಮಾರ್ಕ 9:1).

5. ಅಪೊಸ್ತಲರ ಕೃತ್ಯ 2ಕ್ಕೆ, ಪರಿಶುದ್ಧಾತ್ಮನು ಬಂದ ದಿನಕ್ಕೆ ನಾವು ಪುನಃ ತರಲ್ಪಡುತ್ತೇವೆ. ಅಪೊಸ್ತಲರು ಪರಿಶುದ್ಧಾತ್ಮನನ್ನು ಹೊಂದುವಾಗ ಬಲವು ಬರಲಿಕ್ಕಿತ್ತು (ಅಪೊಸ್ತಲರ ಕೃತ್ಯ 1:8). ಕೆಲವು ಶಿಷ್ಯರ ಜೀವನದ ಸಮಯದಲ್ಲಿಯೇ ರಾಜ್ಯವು ಬರಲಿಕ್ಕಿತ್ತು. ಅದು ಬಲದೊಂದಿಗೆ ಬರಲಿಕ್ಕಿತ್ತು (ಮಾರ್ಕ 9:1). ಆದುದರಿಂದ ಅಪೊಸ್ತಲರ ಕೃತ್ಯ 2ರಲ್ಲಿ ದಾಖಲೆಯಾದಂತೆ, ಪಂಚಾಶತ್ತಮ ದಿನದಂದು ರಾಜ್ಯವು ಬಂದಿತು. ಈ ದಿನದ ಘಟನೆಗಳು ರಾಜ್ಯವನ್ನು ಸ್ಥಾಪಿಸುವದನ್ನು ಕುರಿತು ಮೊದಲು ಹೇಳಿದ ಎಲ್ಲಾ ಪ್ರವಾದನೆಗಳಿಗೆ ಅಗತ್ಯವಾಗಿದ್ದವುಗಳನ್ನು ಪೂರೈಸಿದವು.

## ಸಭೆಯು ರಾಜ್ಯವಾಗಿರುವುದೋ?

ಸಭೆಯ ಪ್ರಾರಂಭವನ್ನು ಕುರಿತ ಎಲ್ಲಾ ಪ್ರಾವಾದನೆಗಳು ಅಪೊಸ್ತಲರ ಕೃತ್ಯ 2ರಲ್ಲಿ ಪಂಚಾಶತ್ತಮ ದಿನದಂದು ನೆರವೇರಿದವು. ದೇವರ ರಾಜ್ಯ ಸ್ಥಾಪನೆಯನ್ನು ಕುರಿತಾದ ಎಲ್ಲಾ ಪ್ರವಾದನೆಗಳ ಬಗೆಗೂ ಇದು ಸತ್ಯವಾಗಿದೆ. ಹೀಗೆ ಒಂದು ತೀರ್ಮಾನದೊಂದಿಗೆ ಎದುರಿಸಲ್ಪಡುತ್ತೇವೆ. ಎರಡು ಸಾಧ್ಯವಾದ ತಿರ್ಮಾನಗಳಲ್ಲಿ ಒಂದಕ್ಕೆ ನಾವು ಬರಬೇಕಾಗುತ್ತದೆ. ಆ ದಿನದಂದು ಎರಡು ಸಂಘಟನೆಗಳು ಸ್ಥಾಪಿಸಲ್ಪಟ್ಟವು ಇಲ್ಲವೇ ಈ ಪ್ರವಾದನೆಗಳು ಒಂದೇ ಸಂಘಟನೆಯ ಬಗ್ಗೆ ಸೂಚಿಸಲ್ಪಟ್ಟಿದ್ದವು. ಕೆಳಗಿನ ಪುರಾವೆಯನ್ನು ಯೋಚಿಸೋಣ.

ಮೊದಲನೆಯದು, ಸಭೆ ಮತ್ತು ದೇವರ ರಾಜ್ಯ ಅದೇ ಜನರನ್ನು ಒಳಗೊಂಡಿದ್ದಾಗಿರುತ್ತದೆ. ಪ್ರಕಟಣೆ 1:4-6ರಲ್ಲಿ ಯೋಹಾನನು ಆಸಿಯಾದಲ್ಲಿಯ ಏಳು ಸಭೆಗಳ ಬಗ್ಗೆ ಬರೆದನು. ಈ ಸಭಾಸದಸ್ಯರು ಒಂದು ರಾಜ್ಯವೆಂದು ಅವನು ಹೇಳಿದನು.

ಅನಂತರ, ಇಬ್ರಿಯ 12ನ್ನು ನೋಡೋಣ. ಆ ಪತ್ರಿಕೆಯ ವಾಚಕರು ಸಭೆಗೆ ಬಂದಿದ್ದಾರೆಂದು (ವ. 23) ಹೇಳುತ್ತದೆ. ಅವರು ರಾಜ್ಯವನ್ನು ಸ್ವೀಕರಿಸಿದ್ದರು ಎಂದು (ವ. 28) ಹೇಳುತ್ತದೆ.

ಯೇಸುವು ಸಭೆಯ ಶಿರಸ್ಸೆಂದೂ ರಾಜ್ಯದ ರಾಜನೆಂದು ನಾವೀಗಾಗಲೇ ನೋಡಿದ್ದೇವೆ. ಹೀಗಿದ್ದರೂ ಆತನಿಗೆ ಒಂದೇ ಒಂದು ದೇಹವಿರುವದೆಂದು ನಮಗೆ ಹೇಳಲ್ಪಟ್ಟಿದೆ (ಎಫೆಸ 4:4). ಆದುದರಿಂದ ಇವೆರಡೂ ಒಂದೇ ಯಾಗಿರಬೇಕು, ಇಲ್ಲದಿದ್ದರೆ ಎರಡು ದೇಹಗಳಿರಬೇಕಾಗುತ್ತದೆ.

ತನ್ನ ಮೇಜು ರಾಜ್ಯದಲ್ಲಿರುವದೆಂದು ಯೇಸು ಮುಂತಿಳಿಸಿದನು (ಲೂಕ 22:29, 30). ಆತನು ಸ್ಥಾಪಿಸಿದ ವಿಶೇಷ ಭೋಜನದಲ್ಲಿ ಶಿಷ್ಯರು - ಸಭೆಯಲ್ಲಿದ್ದವರು ಪಾಲುಗಾರರಾದರು (ಅಪೊಸ್ತಲರ ಕೃತ್ಯ 20:7; 1 ಕೊರಿಂಥ 11). ಸಭೆಯು ದೇವರ ರಾಜ್ಯವಾಗಿರುವದೆಂಬುದನ್ನು ಇದು ತೋರಿಸುತ್ತದೆ.

ದೇವರ ಮನೆಯವರಿಗೆ, ಸಭೆಗೆ (1 ಪೇತ್ರ 2:6; 4:17; 1 ತಿಮೊಥೆ 3:15) ಪೇತ್ರನು ಬರೆದಾಗ, ಆ ಮನೆತನದ ಸದಸ್ಯರು ಪುನರ್ಜನ್ಮ ಹೊಂದಿದ್ದಾರೆಂದು ಅವರಿಗೆ ಹೇಳಿದನು (1 ಪೇತ್ರ 1:23). ದೇವರ ರಾಜ್ಯದಲ್ಲಿ ಪ್ರವೇಶಿಸುವ ಒಬ್ಬನು ಹೊಸದಾಗಿ ಹುಟ್ಟಬೇಕೆಂದು ಯೋಹನ 3:3 ಹೇಳುತ್ತದೆ. ಒಬ್ಬನು ರಾಜ್ಯವನ್ನು ಪ್ರವೇಶಿಸಲು ಅನುಸರಿಸಿದ ವಿಧಾನವೂ ಸಭೆಯ ಸದಸ್ಯರಾಗಲು ಅನುಸರಿಸಿದ ವಿಧಾನವೂ ಒಂದೇ ರೀತಿಯಾಗಿದೆ. ಇದನ್ನು ಮುಂದುವರಿಸಿ, ಒಬ್ಬನು ರಕ್ಷಿಸಲ್ಪಟ್ಟಾಗ ಅವನು ಸಭೆಗೆ ಕೂಡಿಸಲ್ಪಟ್ಟನು ಎಂದು ಹೇಳಬಹುದು (ಅಪೊಸ್ತಲರ ಕೃತ್ಯ 2:47). ರಕ್ಷಿಸಲ್ಪಡಲು ಪ್ರತಿಯೊಬ್ಬ ಪಾಪಿಯು ನಂಬತಕ್ಕದ್ದು ಮತ್ತು ಬಾಪ್ತಿಸ್ಮ ಹೊಂದತಕ್ಕದ್ದು (ಮಾರ್ಕ 16:16). ಸಭೆಯು ರಾಜ್ಯವಾಗಿರುವದರಿಂದ ನಂಬುವುದು ಮತ್ತು ಬಾಪ್ತಿಸ್ಮವನ್ನು ಮಾಡಿಸಿಕೊಳ್ಳುವುದು ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದಕ್ಕೆ ಸಮಾನವಾಗಿದೆ (ಯೋಹಾನ 3:5).

## ಮುಕ್ತಾಯ

ಸಭೆಯು ರಾಜ್ಯವಾಗಿದೆ. "ಸಭೆ" ಎಂಬ ಪದವು ಲೋಕದಿಂದ ಬೇರೆಯಾಗಿರುವದನ್ನು ಒತ್ತಿ ಹೇಳುತ್ತದೆ. "ರಾಜ್ಯ" ಎಂಬುದು ಅದು ಕರ್ತನಾದ ಯೇಸು ಕ್ರಿಸ್ತನಿಂದ ಆಡಳಿತೆ ಮಾಡಲ್ಪಟ್ಟು ನಡಿಸಲ್ಪಡುವ ಹೊರಗೆ ಕರೆಯಲ್ಪಟ್ಟ ಸಮಾಜವಾಗಿದೆ ಎಂಬುದನ್ನು ಒತ್ತಿ ಹೇಳುತ್ತದೆ. ಅದು ರಕ್ಷಿಸಲ್ಪಟ್ಟ, ಲೋಕದೊಳಗಿಂದ ಹೊರಗೆ

ಕರೆಯಲ್ಪಟ್ಟವರಿಂದ ಮಾಡಲ್ಪಟ್ಟಿದೆ. ಇವರು ಅದರ ನಾಗರಿಕರಾಗಿದ್ದಾರೆ ಮತ್ತು ನಾಗರಿಕತ್ವದ ಹಕ್ಕು ಬಾಧ್ಯತೆಗಳನ್ನೂ ಆಶೀರ್ವಾದಗಳನ್ನೂ ಅನುಭವಿಸುವವರು ಇವರೇ ಆಗಿದ್ದಾರೆ.

---

## ಸಜೀವ ಪತ್ರಗಳಾಗಿರುವುದು

ಕ್ರೈಸ್ತರು ಸಜೀವ ಪತ್ರಗಳಾಗಿದ್ದಾರೆ (2 ಕೊರಿಂಥ 3:2). ನಾವು ಇತರರಿಂದ ಓದಲ್ಪಡುತ್ತೇವೆ. ಕ್ರೈಸ್ತರಾಗಿರುವೆವೆಂದು ಅರಿಕೆ ಮಾಡುವವರ ಜೀವಿತಗಳನ್ನೂ ಬಿಟ್ಟು ಧಾರ್ಮಿಕ ಕ್ಷೇತ್ರದಲ್ಲಿ ಬೇರೆ ಯಾವುದನ್ನೂ ಕೆಲವರು ಓದುವದಿಲ್ಲ. ಈ ಸಂಗತಿಯ ಬೆಳಕಿನಲ್ಲಿ ಜ್ಞಾಪಿಸಿಕೊಳ್ಳುವ ಕೆಲವು ವಿಚಾರಗಳಿವೆ.

ನೀವು ಸಜೀವ ಪತ್ರಿಕೆಯಾಗಿದ್ದೀರಿ: ನೀವು ಕ್ರೈಸ್ತರಾಗಿದ್ದರೂ ಕ್ರೈಸ್ತರಾಗಿರದಿದ್ದರೂ ಇದು ಸತ್ಯವಾದದ್ದಾಗಿದೆ. ಜನರು ನಿಮ್ಮನ್ನು ಗಮನಿಸುವಾಗ, ಅವರು ಒಂದು ಸಂದೇಶ ವನ್ನು ಓದುವರು. ಅಲ್ಪರೂ ಗಣನೆಗೆ ಬಾರದವರೂ ಕರ್ತನಿಗಾಗಿ ತಾವು ಏನನ್ನೂ ಮಾಡಲಾರವೆಂದು ಯೋಚಿಸುವವರು ಆಗಿರುವವರಿಗಾಗಿ ಇಲ್ಲಿ ಒಂದು ಪಾಠವಿದೆ. ಪ್ರತಿಯೊಬ್ಬರಿಗೂ ಇತರರ ಮೇಲೆ ಪ್ರಭಾವವಿರುತ್ತದೆ.

ನಿಮ್ಮ ಪ್ರಭಾವವು ಒಳ್ಳೇಯದಾಗಿರಬಹುದು ಇಲ್ಲವೇ ಕೆಟ್ಟದ್ದಾಗಿರಬಹುದು ಜನರು ನಿಮ್ಮನ್ನು ಗಮನಿಸುವಾಗ ಅವರು ಒಳ್ಳೆಯ ಸಂದೇಶವನ್ನಾಗಲೀ ಇಲ್ಲವೇ ಕೆಟ್ಟ ಸಂದೇಶವನ್ನಾಗಲೀ ಓದುವರು: ಮಧ್ಯದಲ್ಲಿಯ ನೆರೆಯಿರುವದಿಲ್ಲ. "ನನ್ನೊಂದಿಗೆ ಇರದೇ ಇರುವವನು ನನಗೆ ವಿರೋಧಿಯಾಗಿದ್ದಾನೆ" (ಮತ್ತಾಯ 12:30) ಎಂದು ಯೇಸು ಹೇಳಿದನು. ಒಳ್ಳೆಯ ಪ್ರಭಾವವಿಲ್ಲದವನು ಕೆಟ್ಟ ಪ್ರಭಾವವುಳ್ಳವನಾಗುವನು. ಸಭೆಗಾಗಿ ನೀನು ಬಲಶಾಲಿಯಾದ ಪ್ರಭಾವವಾಗಿದ್ದೀಯೋ?

ನೀವು ಪ್ರಭಾವವನ್ನು ಕಳೆದು ಕೊಳ್ಳಲಾರಿರಿ ನೀವು ನಿಮ್ಮ ಒಳ್ಳೇ ಪ್ರಭಾವವನ್ನು ಕಳೆದು ಕೊಳ್ಳಬಹುದು, ಆದರೆ ಆಗ ನಿಮಗೆ ಯಾಂತ್ರಿಕವಾಗಿ ಕೆಟ್ಟ ಪ್ರಭಾವವಿರುವುದು. ನೀವೆಲ್ಲಿಗೆ ಹೋದರೂ ಇತರರ ಮೇಲೆ ಪರಿಣಾಮ ಮಾಡಲು ನಿಮ್ಮ ಪ್ರಭಾವವು ಕಾರಣವಾಗುವುದು. ಪ್ರಭಾವದಿಂದ ನೀವು ದೂರ ಓಡಲು ಪ್ರಯತ್ನಿಸಿದರೂ ಆ ಕಾರ್ಯವು ತಾನೇ ಇತರರ ಮೇಲೆ ಪರಿಣಾಮ ಬೀರುವುದು.

© 2009 Truth for Today